**ದಿನಾಂಕಃ 15.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್ ವಕೀಲರಿಂದಃ**

1) ವಾದಿ ರಮೇಶ್ ಬಾಬು ರವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಾಗಿದ್ದರು ಸಹ ಆತ ನ್ಯಾಯಾಲಯಕ್ಕೆ ಹಾಜರಾದಲ್ಲಿ ಸತ್ಯಾಂಶ ಹೊರಬರುತ್ತದೆ ಎಂಬ ಕಾರಣಕ್ಕೆ ನನ್ನ ಮೂಲಕ ಈ ಪ್ರಕರಣವನ್ನು ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು, ವಾದಿ ರಮೇಶ್ ಬಾಬು ಮತ್ತು ಕ್ರಯಪತ್ರದಲ್ಲಿರುವ ಸಾಕ್ಷಿದಾರರು ಕೂಡಿ ದಾವಾ ಸ್ವತ್ತನ್ನು ಕಬಳಿಸಬೇಕೆಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ರ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ವ್ಯವಹಾರದ ಪ್ರಸ್ತಾಪವು 1ನೇ ಪ್ರತಿವಾದಿ ಮತ್ತು ವಾದಿಯ ನಡುವೆ ಆಗಿತ್ತು. ಆ ರೀತಿ ವ್ಯವಹಾರದ ಪ್ರಸ್ತಾಪವು ನಿಪಿ-2ರ ಕರಾರು ಪತ್ರ ಆಗುವ ಎಷ್ಟು ದಿನಗಳ ಮೊದಲೇ ಆಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ವಾದಿ ಮತ್ತು 1ನೇ ಪ್ರತಿವಾದಿಗೆ ಮಾತ್ರ ತಿಳಿದಿರುತ್ತದೆ. ಸದರಿ ವಿಚಾರವನ್ನು ನಾನು ವಾದಿಯಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. ಕರಾರು ಪತ್ರಕ್ಕೆ ವಿಚಾರಗಳನ್ನು ಯಾರು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-2ರ ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2ರಲ್ಲಿ ಇರುವ 4 ಪುಟಗಳಿಗೆ ಹೊಂದಾಣಿಕೆ ಆಗುವಂತೆ ಮಾತ್ರ ಬೆರಳಚ್ಚು ಮಾಡಿಸಿರುತ್ತಾರೆ ಎಂದರೆ ಸರಿ. 2ನೇ ಪುಟ್ಟದಲ್ಲಿ ತಿಳಿಸಿರುವ ವಿವರಗಳನ್ನು ಪ್ರತ್ಯೇಕ ಒಕ್ಕಣೆ ಮಾಡುವ ಮೂಲಕ ನಮೂದಿಸಬಹುದಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2ರಲ್ಲಿ ನಮಗೆ ಅನುಕೂಲ ಆಗುವಂತೆ ಈ ಮೊದಲೇ ಪ್ರತಿವಾದಿಯಿಂದ ಖಾಲಿ ಪತ್ರಕ್ಕೆ ಸಹಿ ಪಡೆದ ನಂತರ ನಾವು ಅಂಶಗಳನ್ನು ಬೆರಳಚ್ಚು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

2) ನಿಪಿ-2ರ ಕರಾರು ಪತ್ರವನ್ನು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಮಾಡಲಾಗಿತ್ತು. ಆ ವೇಳೆಗೆ ವಾದಿ ರಮೇಶ್ ಬಾಬು, 1ನೇ ಪ್ರತಿವಾದಿ ಮಂಜುಳ, ನಾಗಣ್ಣಗೌಡ ಮತ್ತು ಕರಿಯಪ್ಪ ಇದ್ದರು. ನಿಪಿ-2ರ ಕರಾರು ಪತ್ರದ 2ನೇ ಪುಟದಲ್ಲಿ ಕೆಲವು ಪದಗಳನ್ನು ಹೊಡೆದು ಹಾಕಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ 2ನೇ ಪುಟದಲ್ಲಿ ಪದಗಳನ್ನು ಯಾರು ಮತ್ತು ಯಾವ ಕಾರಣಕ್ಕೆ ಹೊಡೆದು

ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ಪದಗಳನ್ನು ಹೊಡೆದು ಪತ್ರವನ್ನು ತಿದ್ದುಪಡಿ ಮಾಡಿರುವ ಬಗ್ಗೆ ನಾನು ವಾದಿ ರಮೇಶ್ ರವರಿಂದ ಮಾಹಿತಿ ಪಡೆದುಕೊಂಡಿರುತ್ತೇನೆ. ನಿಡಿ-2ರ 2ನೇಪುಟದಲ್ಲಿ ನಾನು, ವಾದಿ ಮತ್ತು ವಾದಿ ರಮೇಶ್ ಮತ್ತು ಆತನ ಸಹಚರರು ಕೂಡಿ ಪ್ರತಿಫಲದ ಮೊತ್ತವನ್ನು ಹೊಡೆದು ಹಾಕಿ ಅದಕ್ಕೆ ಪೂರಕವಾಗಿ ಇದ್ದ ಇತರ ಸಂಗತಿಗಳನ್ನು ಹೊಡೆದು ಹಾಕಿ ನಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-2ರ 2ನೇಪುಟದಲ್ಲಿ ತಿದ್ದುಪಡಿ ಆದ ಕುರಿತು ಪತ್ರಬರಹಗಾರರಿಂದ ಅಲ್ಲಿ ಒಕ್ಕಣೆ ಬರೆಸಿ ಸಹಿ ಮಾಡಲು ತೊಂದರೆ ಇತ್ತೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2ರ ಕರಾರು ಪತ್ರ ಮಾಡಿದ ದಿನದಂದೆ ಕ್ರಯಪತ್ರ ಮಾಡಿಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಸದರಿ ವಿಚಾರ ವಾದಿ ಮತ್ತು 1ನೇ ಪ್ರತಿವಾದಿಗೆ ಗೊತ್ತಿದ್ದು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಕ್ರಯಪತ್ರ ಮಾಡಿಕೊಳ್ಳಲು ವಾದಿ ಮತ್ತು 1ನೇ ಪ್ರತಿವಾದಿ ಸಮಯ ಕೋರಿದ್ದು ಏಕೆ ಸಮಯ ಕೋರಿದ್ದರು ಎಂದು ಅವರಿಗೆ ಮಾತ್ರ ಗೊತ್ತಿರುತ್ತದೆ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ-2ರ ಪತ್ರವನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

3) ನಿಪಿ-2ಕ್ಕೆ ಸಹಿ ಮಾಡಿದ ಸಾಕ್ಷಿದಾರರನ್ನ ವಾದಿಯೇ ಕರೆದುಕೊಂಡು ಬಂದಿದ್ದರು. ಸದರಿ ಸಾಕ್ಷಿದಾರರು ವಾದಿಗೆ ಸಾಕಷ್ಟು ಪರಿಚಯದ ವ್ಯಕ್ತಿಗಳು ಎಂದರೆ ಸರಿ. ವಾದಿ ತನ್ನ ವ್ಯವಹಾರದ ಎಲ್ಲಾ ಪತ್ರ ವ್ಯವಹಾರಗಳನ್ನು ಎಚ್ ಕೆ ಸುರೇಶ್ ರವರ ಬಳಿಯಲ್ಲಿಯೇ ಬರೆಸುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ವಾದಿಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿ, ನಿಪಿ-2ಕ್ಕೆ ಸಹಿ ಮಾಡಿದ ಸಾಕ್ಷಿದಾರರು ಮತ್ತು ಪತ್ರ ಬರಹಗಾರರು ಎಲ್ಲರೂ ಶಾಮೀಲಾಗಿ ನಿಪಿ-2ನ್ನು ಸೃಷ್ಠಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-2ರ ಪತ್ರವನ್ನು ತಯಾರಿಸುವ ಕಾಲಕ್ಕೆ ಅದರಲ್ಲಿ ಮುದ್ರಾಂಕ ಶುಲ್ಕ ಕಡಿಮೆ ಇದೆ ಎಂಬ ಬಗ್ಗೆ ವಾದಿಗೆ ಸುರೇಶ್ ರವರು ತಿಳಿಸಿದ್ದರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನೈಜವಾಗಿ ಕರಾರು ವ್ಯವಹಾರ ಆಗಿದ್ದಲ್ಲಿ ಸರಿಯಾದ ಮುದ್ರಾಂಕ ಶುಲ್ಕ ಹೊಂದಿರುವ ಪತ್ರವನ್ನು ಪಡೆದು ಕರಾರನ್ನು ತಯಾರಿಸುತ್ತಿದ್ದೇವು ಎಂದರೆ ಸರಿಯಲ್ಲ. ನಿಪಿ-2ರ ಕರಾರು ಪತ್ರವನ್ನು ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಿಪಿ-2ರ ಕರಾರು ವ್ಯವಹಾರ ಜರುಗಿಲ್ಲ, ಆ

ಬಗ್ಗೆ ಯಾವುದೇ ಮಾತುಕತೆ ಆಗಿರಲಿಲ್ಲ ಆದರೂ ಸಹ ದಾವಾ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2ರಲ್ಲಿ ಇರುವ ಸಂಪೂರ್ಣ ವಿಚಾರಗಳನ್ನು ಸುಳ್ಳಾಗಿ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

4) ನಿಪಿ-2ರ ಕರಾರು ಪತ್ರವನ್ನು ಮೋಸ ಮಾಡಿ ತಯಾರಿಸಿರುತ್ತಾರೇ ಎಂದು 1ನೇ ಪ್ರತಿವಾದಿ ಎಂ ಸಿ ಕರಿಯಪ್ಪ ಮತ್ತು ರೂಪ್ ಸಿಂಗ್ ರವರ ವಿರುದ್ದ ಕಾಮಾಕ್ಷೀಪಾಳ್ಯದ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ದೂರು ದಾಖಲಿಸಿದ ನಂತರ ಎಂ ಸಿ ಕರಿಯಪ್ಪ ಮತ್ತು ರೂಪ್ ಸಿಂಗ್ ರವರು ಸದರಿ ದೂರಿನ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-8ರ ಪ್ರತಿಯನ್ನು ನನಗೆ ಯಾರು ಕೊಟ್ಟಿದ್ದು ಎಂದು ನನಗೆ ಗೊತ್ತಿಲ್ಲ ಮತ್ತು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ಎಂ ಸಿ ಕರಿಯಪ್ಪ ಮತ್ತು ರೂಪ್ ಸಿಂಗ್ ರವರು ನನಗೆ ನೀಡಿ ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಕರಿಯಪ್ಪರವರ ಪರಿಚಯ ಇದೆ ಆದರೆ ರೂಪ್ ಸಿಂಗ್ ರವರು ಯಾರು ಎಂದು ನನಗೆ ಗೊತ್ತಿಲ್ಲ. ರೂಪ್ ಸಿಂಗ್ ರವರು ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಎಂ ಸಿ ಕರಿಯಪ್ಪ ಮತ್ತು ರೂಪ್ ಸಿಂಗ್ ರವರ ಜೊತೆ ಒಡಂಬಡಿಕೆ ಮಾಡಿಕೊಂಡು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ರಮೇಶ್ ಬಾಬು ರವರು ರಾಜಕೀಯವಾಗಿ ಸಾಕಷ್ಟು ಶಕ್ತಿ ಹೊಂದಿರುತ್ತಾರೆ ಎಂದರೆ ಸರಿ. ಆತ ತನ್ನ ರಾಜಕೀಯ ಬಲ ಬಳಸಿ 1ನೇ ಪ್ರತಿವಾದಿ ನೀಡಿದ ದೂರಿಗೆ ಬಿ ಅಂತಿಮ ವರದಿ ಸಲ್ಲಿಸುವಂತೆ ಪ್ರಭಾವ ಬೀರಿ ಆಕೆಯ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಪ್ರಕರಣವನ್ನು ಮಧ್ಯಾಹ್ನದ ವೇಳೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**

**ದಿನಾಂಕಃ 15.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್ ವಕೀಲರಿಂದಃ**

1) ಸಾಕ್ಷಿಯು ಅಸಲು ದಾವಾ ಸಂಖ್ಯೆ 106/2015ರ ಪ್ರಕರಣದಲ್ಲಿನ ವಾದ ಪತ್ರದ ದೃಢೀಕೃತ ಪ್ರತಿಯನ್ನು ನೋಡಿ ಅದರಲ್ಲಿ 1ನೇ ಪ್ರತಿವಾದಿಯ ಹೆಸರು ಮತ್ತು ವಿಳಾಸ ಸರಿಯಾಗಿ ಇದೆ ಎಂದು ನುಡಿದಿದ್ದು, ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ವಾದಿ ರಮೇಶ್ ಬಾಬು ರವರ ಸಹಿಯನ್ನು ನೋಡಿರುವುದಿಲ್ಲ. ನಾನು ಈ ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ಈ ಹಿಂದೆ ಯಾವತ್ತು ಸಹ ವಾದಿ ರಮೇಶ್ ಬಾಬು ರವರ ಸಹಿ ನೋಡಿರುವುದಿಲ್ಲ. ನಿಡಿ-1ರ ಪ್ರಕಾರ ಸರೋಜಮ್ಮ ರವರು ಈ ಪ್ರಕರಣದ ವಾದಿ ರಮೇಶ್ ಬಾಬು ರವರ ವಿರುದ್ದ ಆತ ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿಕೊಂಡು ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದು ಹೇಳಿ ದಾವೆಯನ್ನು ಹೂಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ವಾದಿ ರಮೇಶ್ ಬಾಬು ರವರು ಪ್ರತಿವಾದ ಪತ್ರವನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರೋಜಮ್ಮ ರವರು ವಾದಿ ರಮೇಶ್ ಬಾಬು ರವರ ವಿರುದ್ದ ಕ್ರಮ ತೆಗೆದುಕೊಳ್ಳುವಂತೆ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದೂರಿನ ಮೇರೆಗೆ ವಾದಿಯ ವಿರುದ್ದ ಪ್ರಕರಣ ದಾಖಲಾಗಿ

ತನಿಖೆ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ರಮೇಶ್ ಬಾಬು ರವರು ಜನರಿಂದ ಸುಳ್ಳು ದಾಖಲೆಗಳನ್ನು ಪಡೆದು ಆತ ಅವುಗಳನ್ನು ಆಸ್ತಿ ಮಾರಾಟ ಒಪ್ಪದಂತೆ ಪತ್ರವನ್ನು ತಯಾರಿಸಿ ಈ ರೀತಿ ಸುಳ್ಳು ಪ್ರಕರಣಗಳನ್ನು ದಾಖಲಿಸುವ ಹವ್ಯಾಸ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅನುಕೂಲಕ್ಕೆ ತಕ್ಕಂತೆ ನಿಪಿ-2ರ ಕರಾರು ಪತ್ರವನ್ನು ಸೃಷ್ಠಿ ಮಾಡಿ ಮತ್ತು ಅದನ್ನು ತಿದ್ದುಪಡಿ ಮಾಡಿಕೊಂಡು ಪ್ರತಿವಾದಿಗಳಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವತ್ತು ಸಹ ನಿಪಿ-2ರ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

2) 1ನೇ ಪ್ರತಿವಾದಿ ದಾವಾ ಸ್ವತ್ತನ್ನು 2ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ ನಂತರ 2ನೇ ಪ್ರತಿವಾದಿ ಪುನಃ ದಾವಾ ಸ್ವತ್ತನ್ನು 3ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು ಪ್ರಸ್ತುತ 3ನೇ ಪ್ರತಿವಾದಿ ದಾವಾ ಸ್ವತ್ತಿಗೆ ಸ್ವಾಧೀನದಲ್ಲಿ ಇರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಬದಲಾವಣೆ ಆಗಿ ಅವರು ಅಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2ರ ಕರಾರು ಪತ್ರದಲ್ಲಿ ತಿಳಿಸಿದಂತೆ ಯಾವುದೇ ವ್ಯವಹಾರ ಆಗಿಲ್ಲ ಮತ್ತು 1ನೇ ಪ್ರತಿವಾದಿಗೆ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-2ರ ಕರಾರು ಪತ್ರ ಮೋಸದ ಪತ್ರ ಆಗಿರುವ ಕಾರಣ ಅದನ್ನು ನೊಂದಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2ರ ಕರಾರು ಪತ್ರದ 2ನೇ ಪುಟದಲ್ಲಿ ಮಾಡಿರುವ ತಿದ್ದುಪಡಿಗಳ ಬಗ್ಗೆ ನನಗೆ ಗೊತ್ತಿಲ್ಲ. ಯಾರು, ಯಾವಾಗ ಮತ್ತು ಎಲ್ಲಿ ಹಾಗೂ ಯಾವ ಉದ್ದೇಶಕ್ಕೆ ಆ ರೀತಿ ಪತ್ರವನ್ನು ತಿದ್ದುಪಡಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ತಿದ್ದುಪಡಿಗಳನ್ನು ಮಾಡಿದ ಕಾಲಕ್ಕೆ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ತಿದ್ದುಪಡಿಗಳಿಗೆ 1ನೇ ಪ್ರತಿವಾದಿ ಒಪ್ಪಿಗೆ ಸೂಚಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ಕರಾರು ಆಗದೆ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**